**ಸಾಕ್ಷಿಯನ್ನು ದಿಃ 19.09.2024 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ವಕೀಲರಿಂದಃ**

ನನ್ನ ತಾತನ ಹೆಸರು ನಾರಾಯಣ ಸ್ವಾಮಿರಾಜು. ನನ್ನ ತಂದೆಯ ಹೆಸರು ಎನ್. ವೇಣುಗೋಪಾಲ ರಾಜು. ನನ್ನ ತಾತನಿಗೆ ಎಷ್ಟು ಜನ ಹೆಂಡತಿಯರು ಎಂದರೆ ನನಗೆ ಗೊತ್ತಿಲ್ಲ. ವೇಣುಗೋಪಾಲ ರಾಜು ನಾರಾಯಣಾಸ್ವಾಮಿರಾಜು ರವರ ಮಗ ಎಂದರೆ ಸರಿ. ನನ್ನ ತಂದೆ ವೇಣುಗೋಪಾಲರಾಜು ರವರಿಗೆ ಇಬ್ಬರು ಹೆಂಡತಿಯರು. ಮೊದಲನೇ ಹೆಂಡತಿಯ ಹೆಸರು ಸುಬ್ಬಮ್ಮ, ಎರಡನೇ ಹೆಂಡತಿಯ ಹೆಸರು ಗೌರಮ್ಮ. ಸುಬ್ಬಮ್ಮನಿಗೆ ಶ್ರೀಲಕ್ಷಮ್ಮ, ನಾಗರತ್ನಮ್ಮ ಮತ್ತು ಲಕ್ಷ್ಮೀಪತಿ ರಾಜು ಎಂಬ ಮೂರು ಜನ ಮಕ್ಕಳು. ಗೌರಮ್ಮನಿಗೆ ಚಂದ್ರಮ್ಮ, ರಾಮರಾಜು, ಮೋಹನರಾಜು ಮತ್ತು ಹೇಮಾವತಿ ಎಂಬ ನಾಲ್ಕು ಜನ ಮಕ್ಕಳು. ನನ್ನ ತಂದೆ ಮೃತ ಪಡುವ ಮೊದಲು ಒಂದು ವಿಲ್ಲುನಾಮೆಯನ್ನು ಬರೆದಿದ್ದರು ಎಂದರೆ ಸರಿ. ಮುಂದುವರೆದು ವಿಭಾಗ ಪತ್ರವನ್ನು ಸಹ ಬರೆದಿದ್ದರು ಎಂದು ಉತ್ತರಿಸಿರುತ್ತಾರೆ. ಸದರಿ ವಿಭಾಗಪತ್ರ ನೊಂದಣಿಯಾಗಿರುತ್ತದೆ. ಸದರಿ ವಿಭಾಗ ಪತ್ರದಲ್ಲಿ ಮೊದಲನೇ ಹೆಂಡತಿ ಮತ್ತು ಎರಡನೇ ಹೆಂಡತಿ ಮಕ್ಕಳಿಗೆ ಏನೆಲ್ಲಾ ಭಾಗ ಬರಬೇಕು ಎಂದು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಮೊದಲನೇ ಹೆಂಡತಿಯ ಮಗ ಲಕ್ಷ್ಮೀಪತಿ ರಾಜು ಗೆ ಮಾತ್ರ ವಿಭಾಗ ಪತ್ರದಲ್ಲಿ ಬರೆದಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ ವಿಭಾಗ ಪತ್ರದಲ್ಲಿ ವಿದ್ಯಾರಣ್ಯ ಪುರಂ ನಲ್ಲಿರುವ ಮನೆ ಮತ್ತು ಜಮೀನು ಲಕ್ಷ್ಮೀಪತಿರಾಜು ರವರಿಗೆ ನೀಡಿರುತ್ತಾರೆ. ಮುಂದುವರೆದು ಜಮೀನನ್ನು ಲಕ್ಷ್ಮೀಪತಿರಾಜು ಜೀವಂತವಿರುವಾಗಲೇ ಮಾರಾಟ ಮಾಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ ವಿಭಾಗ ಪತ್ರವನ್ನು ಹಾಜರು ಪಡಿಸಿರುತ್ತೇನೆ. ವಿಭಾಗ ಪತ್ರದಲ್ಲಿ ಲಕ್ಷ್ಮೀಪತಿರಾಜು ರವರಿಗೆ ಮಾತ್ರ ಬರೆದಿರುವುದಿಲ್ಲ ಎಂದರೆ ಸರಿಯಲ್ಲ.

ಮೇಲೆ ಹೇಳಿದ ಜಮೀನು ಕಡಕೋಳ ಗ್ರಾಮದಲ್ಲಿದೆ. ಅದು ಒಟ್ಟು ಎಷ್ಟು ಎಕರೆ ಇತ್ತು ಎಂದು ಗೊತ್ತಿಲ್ಲ. ಸದರಿ ಜಮೀನು ಮತ್ತು ನನ್ನ ಹೆಸರಿನಲ್ಲಿರುವ ಜಮೀನು ಒಟ್ಟು ಸೇರಿ 9 ಎಕರೆ ಇತ್ತು ಎಂದರೆ ಆ ಬಗ್ಗೆ ಗೊತ್ತಿಲ್ಲ. ಮುಂದುವರೆದು ಕಡಕೊಳದಲ್ಲಿದ್ದ ಜಮೀನನ್ನು ಕೆ.ಇ.ಬಿ ಗೆ ಸ್ವಾಧೀನ ಪಡಿಸಿಕೊಂಡಿದ್ದಾರೆ ಎಂದು ಉತ್ತರಿಸಿರುತ್ತಾರೆ. ಅದರಿಂದ ಬಂದ ಹಣವನ್ನು ನಾನು ಮತ್ತು ನನ್ನ ಅಣ್ಣ ರಾಮರಾಜು ರವರು ಪಡೆದುಕೊಂಡಿರುತ್ತೇವೆ. ಸ್ವಲ್ಪ ಜಮೀನು ಮಾತ್ರ ಸ್ವಾಧೀನ ಪಡಿಸಿಕೊಂಡಿದ್ದು ಉಳಿದ ಜಮೀನನ್ನು ಜಾಕಪ್ ಪಿಲಿಫ್ಸ್‌ರವರಿಗೆ ಮಾರಾಟ ಮಾಡಿರುತ್ತೇನೆ

ಎಂದರೆ ಸರಿಯಲ್ಲ. ಇನ್ನೂ ಎರಡು ಎಕರೆ ಜಮೀನು ನನ್ನ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಸದರಿ ಜಮೀನು ನಾರಾಯಣಸ್ವಾಮಿರಾಜು ರವರಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ಸದರಿ ಜಮೀನು ನನಗೂ ಮತ್ತು ನನ್ನ ಅಣ್ಣನಿಗೂ ವಿಭಾಗದ ಮೂಲಕ ಬಂದಿರುತ್ತದೆ. ಸದರಿ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಪ್ರತಿವಾದಿಗಳಿಗೂ ಹಕ್ಕು ಇದೆ ಎಂದರೆ ಸರಿಯಲ್ಲ.

ಬಸವೇಶ್ವರ ರಸ್ತೆಯಲ್ಲಿ ನನ್ನ ಮನೆ 60*40 ವಿಸ್ತೀರ್ಣದಲ್ಲಿದೆ. ಮುಂದುವರೆದು ಸಾಕ್ಷಿಯು ಅದರಲ್ಲಿ ಚಂದ್ರಮ್ಮ, ರಾಮರಾಜು, ಮೋಹನರಾಜು ಮತ್ತು ಹೇಮಾವತಿ ನಾಲ್ಕು ಜನರಿಗೆ ಭಾಗ ಇದೆ ಎಂದು ಉತ್ತರಿಸಿರುತ್ತಾರೆ. ಮೊದಲನೆ ಹೆಂಡತಿಯ ಮಕ್ಕಳಿಗೆ ದಾವ ಸ್ವತ್ತನ್ನು ನನ್ನ ತಂದೆಯವರು ಲಕ್ಷ್ಮೀಪತಿರಾಜು ರವರಿಗೆ ನೀಡಿರುತ್ತಾರೆ. ಮೊದಲನೆ ಹೆಂಡತಿಯ ಇಬ್ಬರು ಹೆಣ್ಣು ಮಕ್ಕಳಿಗೂ ದಾವ ಸ್ವತ್ತಿನಲ್ಲಿ ಹಕ್ಕಿದೆ ಎಂದರೆ ಸರಿಯಲ್ಲ. ಲಕ್ಷ್ಮೀಪತಿರಾಜು ರವರಿಗೆ ಮದುವೆಯಾಗಿರಲಿಲ್ಲ. ಅವರಿಗೆ ಮಕ್ಕಳಿಲ್ಲದೇ ಇರುವ ಕಾರಣ ಅವರ ಸ್ವಂತ ಅಕ್ಕತಂಗಿಯರಿಗೆ ಮಾತ್ರ ಹಕ್ಕಿದೆ ಎಂದರೆ ಸರಿಯಲ್ಲ. ಲಕ್ಷ್ಮೀಪತಿರಾಜು ನನಗೆ ಮಲತಮ್ಮ ಎಂದರೆ ಸರಿಯಲ್ಲ. ನಮ್ಮ ಉಳಿದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿಯು ಭಾಗ ಆಗಿರುವ ಕಾರಣ ಸೇರಿಸಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಕಡಕೋಳದ ಜಮೀನು ಮತ್ತು ಬಸವೇಶ್ವರ ರಸ್ತೆಯಲ್ಲಿರುವ ಮನೆಯಲ್ಲಿಯೂ ಸಹ ಎಲ್ಲರಿಗೂ ಭಾಗ ಇದೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು ನೀಡಲಾಯಿತು.)

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮೈಸೂರು.